ಎಂ ವಿ ಸಿ ನಂಃ 15/2024
ಪಿ ಡಬ್ಲ್ಯುಃ 1

<u>ದಿನಾಂಕಃ**25-07-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀಮತಿ.ಎಸ್.ಎಂ.,ವಕೀಲರಿಂದಃ</u>

ನನಗೆ ಈಗ 18 ವರ್ಷ ವಯಸ್ಸು ಇರುತ್ತದೆ. ನಾನು ನನಗೆ 18 ವರ್ಷ ಇರುವ ಸಂಬಂಧ ನನ್ನ ಆಧಾರ್ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 10 ನೇ ತರಗತಿವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಕೂಲಿ ಕೆಲಸ ಮಾಡುತ್ತಾ ಇದ್ದೇನೆ. ನನಗೆ ಮಾಸಿಕ ರೂ.25,000/- ಸಾವಿರ ಸಂಬಳ ಆದಾಯ ಇರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಮಾಸಿಕ ರೂ.25,000/- ಸಾವಿರ ಆದಾಯ ಇರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇರುತ್ತದೆ ಆದರೆ ಅದು ಯಾವುದು ಎಂದು ನನಗೆ ಮಾಹಿತಿ ಇರುವುದಿಲ್ಲ. ನಮ್ಮ ಕುಟುಂಬದ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

2. ನಾನು ಆ ದಿನ ನಮ್ಮ ತಂದೆ ಚಲಾಯಿಸುತ್ತಿದ್ದ ಸ್ಕೂಟಿಯಲ್ಲಿ ಕೊಪ್ಪದಿಂದ ನಮ್ಮ ಮನೆಗೆ ಹೋಗುತ್ತಿದ್ದೆವು. ನಮ್ಮ ತಂದೆಗೆ ವಾಹನವನ್ನು ಚಲಾಯಿಸಲು ಆ ಕಾಲಕ್ಕೆ ಚಾಲನ ಪರವಾನಿಗೆ ಚಾಲ್ತಿಯಲ್ಲಿತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕ 03.06.2023 ರಂದು ಅಪಘಾತ ಆಗಿರುತ್ತದೆ ಎಂದರೆ ಸರಿ. ದಿನಾಂಕ 14.06.2023 ರಂದು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು 11 ದಿನಗಳ ಕಾಲ ತಡವಾಗಿ ದೂರು ನೀಡಿದ ಬಗ್ಗೆ ಸಕಾರಣ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಕೇಳಿ ಈ ಅರ್ಜಿಯನ್ನು ದಿನಾಂಕ 06.01.2024 ರಲ್ಲಿ ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಈ ಅರ್ಜಿಯನ್ನು ನ್ಯಾಯಾಲಯಕ್ಕೆ 6 ತಿಂಗಳ ಕಾಲಮಿತಿ ಮುಗಿದ ನಂತರ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಈ ಅರ್ಜಿಯನ್ನು ಕಾಲ ವಿಳಂಬ ಮನ್ನ ಮಾಡುವಂತೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಅರ್ಜಿಯನ್ನು ವಿಳಂಬ ಮಾಡಿ ಸಲ್ಲಿಸಿದ ಬಗ್ಗೆ ಸಕಾರಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿಳಂಬ ಮಾಡಿ ಅರ್ಜಿ ಸಲ್ಲಿಸಿದ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸತ್ಯವನ್ನು ಮರೆಮಾಚಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3.ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗಿರುವುದಿಲ್ಲ ನಮ್ಮ ತಂದೆಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಸೇರಿಕೊಂಡು 1 ನೇ

ಎದುರುದಾರರ ವಾಹನವನ್ನು ದೂರಿನಲ್ಲಿ ಪರಿಹಾರ ಪಡೆಯುವ ಸಲುವಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಸಾಮಾನ್ಯ ಸ್ವರುಪದ ಗಾಯವಾಗಿದ್ದರುಾ ಸಹ ತೀವ್ರ ಸ್ವರೂಪದ ಗಾಯಗಳು ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗ ನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆ.ಎಂ.ಸಿ ಆಸ್ಪತ್ರೆ, ಮಣಿಪಾಲ್ ನಲ್ಲಿ ದಿನಾಂಕ 04.06.2023 ರಿಂದ 08.06.2023 ರವರೆಗೆ ಒಳ ರೋಗಿಯಾಗಿ ಚಿಕಿತ್ಸೇ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಅಪಘಾತದಿಂದ ಸಂಪೂರ್ಣವಾಗಿ ಗುಣಮುಖನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವೈಧ್ಯಕೀಯ ವೆಚ್ಚಕ್ಕಾಗಿ ರೂ. 6,00,000/- ಲಕ್ಷ ಹಾಗೂ ಮುಂದಿನ ಚಿಕಿತ್ಸೆಗಾಗಿ ರೂ. 3,00,000/- ಅವಶ್ಯಕತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ವರ್ಷಗಳ ಕಾಲ ವಿಶ್ರಾಂತಿ ಪಡೆಯುವ ಬಗ್ಗೆ ವೈಧ್ಯರು ಹೇಳಿದ ಸಂಬಂಧ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈಧ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಕೇಳಿದಂತ ಪರಿಹಾರ ಪಡೆಯಲು ಬರುವುದಿಲ್ಲ ಹಾಗೂ 3 ನೇ ಎದುರುದಾರರು ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ

ಎಂ ವಿ ಸಿ ನಂಃ 15/2024
ಪಿ ಡಬ್ಲ್ಯುಃ 1